ದಿನಾಂಕ: 20.06.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು 11 ಮತ್ತು 12 ನೇ ಪ್ರತಿವಾದಿಗಳ ಪರ ಶ್ರೀ ಎಸ್ ಜೆ ವಕೀಲರಿಂದಃ**

ನನ್ನ ತಂದೆ ಹೆಸರು ನಾರಾಯಣಪ್ಪ . ನನ್ನ ತಂದೆಯವರು ವೀರಪ್ಪನವರ ಅಣ್ಣ ತಮ್ಮಂದಿರ ಮಧ್ಯೆ ವಿಭಾಗವಾಗುವ ಪಾಲು ವಿಭಾಗಕ್ಕೆ ಸಹಿ ಮಾಡಿರುತ್ತಾರೆ. ಆ ವಿಭಾಗ ಪತ್ರ ನಾನು ನೋಡಿಲ್ಲ. ಆ ವಿಭಾಗ ಪತ್ರದಲ್ಲಿ ನನ್ನ ತಂದೆ ಸಹಿ ಇರುತ್ತದೆ. ಆದರೆ ನಾನು ಆ ವಿಭಾಗ ಪತ್ರವನ್ನು ಓದಿರುವುದಿಲ್ಲ. ವಿಭಾಗ ಪತ್ರದಲ್ಲಿ ಬೇರೆ ಯಾರೆಲ್ಲಾ ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ವಿಭಾಗ ಪತ್ರದಲ್ಲಿ ಇರುವ ಸಹಿ ನನ್ನ ತಂದೆಯದ್ದು ಎಂದು ತೋರಿಸಲು ಬೇರೆ ಯಾವ ದಾಖಲೆ ಹಾಜರು ಪಡಿಸಲು. ವಿಭಾಗ ಪತ್ರದಲ್ಲಿರುವ ನನ್ನ ತಂದೆ ಸಹಿಯನ್ನು ಯರದಕಟ್ಟೆ ಗ್ರಾಮದಲ್ಲಿ ನೋಡಿರುತ್ತೇನೆ. ವಿಭಾಗ ಪತ್ರವನ್ನು ನ್ಯಾಯಾಲಯದಲ್ಲಿ ತೋರಿಸಿ ನನ್ನ ತಂದೆ ಸಹಿ ಇದೆಯಾ ಎಂದು ಕೇಳಿರುವುದಿಲ್ಲ. ಬೇರೆ ಯಾವ ದಾಖಲೆಗಳಿಗೆ ನನ್ನ ತಂದೆ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ . ನನ್ನ ತಂದೆ ಸಹಿಯನ್ನು ನನಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಕುಮಾರ ಸ್ವಾಮಿ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು